**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** 831/2024 **PW**-3

**ದಿಃ26.03.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀಮತಿ ಎ ಎಸ ಡಿ ರವರಿಂದ.**

ನಾನು ಕಿಮ್ಸ ಆಸ್ಪತ್ರೆಯಲ್ಲಿ associate professor ಆಗಿ ಕೆಲಸ ಮಾಡುತ್ತಿದ್ದೇನೆ. ದಿಃ30-04-2024 ರಂದು ಅಪಘಾತವಾಗಿದ್ದು ಆ ಸಮಯದಲ್ಲಿ ನಾನು ಗಾಯಾಳುವನ್ನು ನೋಡಿಲ್ಲವೆಂದರೆ ಸಾಕ್ಷಿ ನೋಡಿಲ್ಲ ಎಂದು ನುಡಿಯುತ್ತಾರೆ. ನಾನು ಹಾಗಾದರೆ ಗಾಯಾಳವನ್ನು ಕೇವಲ ಅಂಗನ್ಯೂನತೆಗೊಸ್ಕರ ನೋಡಿರುತ್ತೇನೆಂದರೆ ಸಾಕ್ಷಿ disability and follow up treatment ಎಂದು ನುಡಿಯುತ್ತಾರೆ. ಈ ಪ್ರಕಾರ ನಾನು ಅಪಘಾತವಾದ 2 ವರ್ಷಗಳ ನಂತರ ಗಾಯಾಳುವನ್ನು ನೋಡಿರುತ್ತೇನೆಂದರೆ ಸರಿ. ಸಾಮಾನ್ಯವಾಗಿ ಅಪಘಾತವಾದ ತಕ್ಷಣಕ್ಕೂ 2 ವರ್ಷಗಳ ನಂತರಕ್ಕೂ ಸಾಕಷ್ಟು ವ್ಯತ್ಯಾಸ ಇದ್ದು ಸದರಿ ಗಾಯ ಗುಣಮುಖವಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಂತರದ 1 ವರ್ಷಗಳಲ್ಲಿ ಸದರಿ ಗಾಯ ಸಂಪೂರ್ಣ ಗುಣಮುಖವಾಗುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಈಗಾಗಲೇ maximum time ಅಂದರೆ 2 ವರ್ಷಗಳ ಅಂತರ ಆಗಿ ಹೋಗಿದೆ ಎನ್ನುತ್ತಾರೆ. ನಾನು ಕೇವಲ ಅರ್ಜಿದಾರ ಸಲ್ಲಿಸಿದ ದಾಖಲೆಗಳನ್ನು ನೋಡಿ ನನ್ನ ತೀರ್ಮಾನ ನೀಡಿರುತ್ತೇನೆಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ಹಾಗೂ ಅರ್ಜಿದಾರರನ್ನು ಪರಿಶೀಲನೆ ಮಾಡಿ ನೋಡಿರುತ್ತೇನೆಂದು ಸಾಕ್ಷಿ ನುಡಿಯುತ್ತಾರೆ.

2 ವರ್ಷಗಳಿಂದ ಆತನ ಸ್ಥಿತಿ ಎನು ಎಂಬುವುದನ್ನು ನಾನು clinical information ನಲ್ಲಿ ನಮೂದು ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ನಾನು ಹಾಜರುಪಡಿಸಿಲ್ಲ ಆದರೆ ನನ್ನ ಅಂಗನ್ಯೂನತೆ ವರದಿಯಲ್ಲಿ ಎಲ್ಲವನ್ನು ನಮೂದು ಮಾಡಿರುತ್ತೇನೆ ಎನ್ನುತ್ತಾರೆ. ನಾನು ಇತ್ತೀಚಿನ ಗಾಯಾಳುವಿನ ಪರೀಕ್ಷೆ ಅಂದರೆ ದಿಃ02-03-2026 ರಂದು ಎಂದರೆ ಸರಿ. ನನ್ನ ಡೆಗ್ನೊಸಿಸ್ ಪ್ರಕಾರ closed fracture midshaft of left humerus without DNVD ಎಂದರೆ ಸಾಕ್ಷಿ fracture is yield but mobility and stability component left arm is reduced ಎಂದು ನುಡಿಯುತ್ತಾರೆ. ಸದರಿ mobility and stability ಬಗ್ಗೆ ಯಾವ ರೀತಿಯ calculation assess ಮಾಡಿದ್ದೀರಿ ಎಂಬ ಬಗ್ಗೆ assessment ವರದಿ ಕೊಟ್ಟಿಲ್ಲವೆಂದರೆ ಸಾಕ್ಷಿ calculation chart ಕೊಟ್ಟಿರುತ್ತೇನೆ ಎನ್ನುತ್ತಾರೆ. ಆದರೆ ದಾಖಲೆಗಳನ್ನು ಪರಿಶೀಲನೆ ಮಾಡಿ

ನೋಡಿ ಅದು ದಾಖಲೆಗಳಲ್ಲಿ ಲಭ್ಯ ಇಲ್ಲದೆ ಇರುವುದು ಕಂಡು ಬರುತ್ತದೆ. ನಾನು ಯಾವುದೇ ಅಂಗನ್ಯೂನತೆಯನ್ನು assess ಮಾಡಿಲ್ಲ ಹಾಗೂ chart ಕೂಡಾ ತಯಾರು ಮಾಡಿಲ್ಲ ಆ ಕಾರಣಕ್ಕೆ ಸದರಿ ಅಂಗನ್ಯೂನತೆ ಮಾಪನ ಸರಿಯಾದ ಪ್ರಮಾಣದಲ್ಲ ಎಂದರೆ ಸಾಕ್ಷಿ calculation chart miss ಆಗಿದೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ.

(ಈ ಹಂತದಲ್ಲಿ ಎದುರುದಾರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಿ ಮುಂದುಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ